# ಗೃಹರಕ್ಷಕ ದಳ, ರಂಗಭೂಮಿ ಕಲಾವಿದ್ರು, ಕಾರ್ಮಿಕರ ೫೦೦ ಕುಟುಂಬಗಳಿಗೆ ಆಹಾರ ಧಾನ್ಯ ವಿತರಣೆ

**ಚಿತ್ರದುರ್ಗ, ಮೇ. 1** - ವೈಚಾರಿಕ ಚಿಂತಕರಾಗಿ ಬಸವತತ್ತ್ವವನ್ನು 21ನೇ ಶತಮಾನದಲ್ಲಿ ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿ ಪಾತ್ರ ಮುರುಘಾ ಶರಣರದು ಎಂದು ಗೃಹರಕ್ಷಕ ದಳದ ಚೀಫ್ ಕಮಾಂಡೆಂಟ್ ಶ್ರೀಮತಿ ಸಂಧ್ಯಾ ಹೇಳಿದರು.

ಶ್ರೀ ಮುರುಘರಾಜೇಂದ್ರ ಮಠದಲ್ಲಿ ಗೃಹರಕ್ಷಕ ದಳದ ಸಿಬ್ಬಂದಿ, ಕಾರ್ಮಿಕರು, ಅಂಗವಿಕಲರು, ರಂಗಭೂಮಿ ಕಲಾವಿದರು ಮೊದಲಾಗಿ 500 ಕುಟುಂಬಗಳಿಗೆ ಆಹಾರಧಾನ್ಯ ವಿತರಿಸಿ ಮಾತನಾಡಿದ ಅವರು, ಕಳೆದ 30 ದಿನಗಳಿಂದ ನಿರಂತರವಾಗಿ ಹಸಿದ ಕಾರ್ಮಿಕರಿಗೆ ದವಸ-ಧಾನ್ಯ ನೀಡುತ್ತಿರುವುದು ನನಗೆ ಹೆಚ್ಚು ಸಂತೋಷವನ್ನು ತಂದಿದೆ. ಶ್ರೀಗಳ ಚಿಂತನ ಕ್ರಮಗಳು ವಿಭಿನ್ನವಾದವುಗಳು. ದಮನಿತರ, ತುಳಿತಕ್ಕೊಳಗಾದ ಜನರನ್ನು ಮೇಲ್ಪಂಕ್ತಿಗೆ ತರುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಎಲ್ಲ ಜಾತಿಯವರನ್ನು ಪ್ರೀತಿಯಿಂದ ಕಾಣುವ ಮನೋಭಾವ ಅವರದು ಎಂದರು.

ಡಾ. ಶಿವಮೂರ್ತಿ ಮುರುಘಾ ಶರಣರು, ಕಾರ್ಮಿಕರ ದಿನಾಚರಣೆ ಅಂಗವಾಗಿ ಶ್ರಮಿಕರಿಗೆ ಗೌರವವನ್ನು ಸಲ್ಲಿಸಿ, ಕೊರೊನಾ ವೈರಸ್ ಬಗ್ಗೆ ಪ್ರತಿಯೊಬ್ಬರು ಜಾಗೃತರಾಗಿರಬೇಕು. ವೈರಸ್ ನಮಗೆ ಯಾವ ಮೂಲದಿಂದಾದರೂ ಬರಬಹುದು. ಎಚ್ಚರಿಕೆ ಅಗತ್ಯ. ಸಾಮಾಜಿಕ ಅಂತರವನ್ನು ಇನ್ನೂ ಕೆಲವು ತಿಂಗಳುಗಳ ಕಾಲ ಮುಂದುವರೆಸಿಕೊಂಡು ಹೋಗಬೇಕಾಗಿದೆ. ದೇಶ ಕೊರೊನಾದಿಂದ ಮುಕ್ತವಾಗಿ ಆರ್ಥಿಕ ಚೇತರಿಕೆ ಕಾಣಬೇಕು. ತನ್ಮೂಲಕ ಅಭಿವೃದ್ಧಿ ಪಥದಲ್ಲಿ ಸಾಗಬೇಕು. ಎಲ್ಲರು ಸೇರಿ ಈ ದೇಶವನ್ನು ಮುನ್ನಲೆಗೆ ಕೊಂಡೊಯ್ಯಬೇಕು ಎಂದು ಹೇಳಿದರು.

ಶಿರಾದ ಪ್ರೆಸಿಡೆನ್ಸಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಚಿದಾನಂದಗೌಡ ಅವರು ಉಚಿತವಾಗಿ ಮಾಸ್ಕ್‌ಗಳನ್ನು ವಿತರಿಸಿ ಮಾತನಾಡಿ, ಮುರುಘಾಮಠ ಎಂದರೆ ಕ್ರಾಂತಿಕಾರಿ ಬದಲಾವಣೆಗಳಿಗೆ ಮತ್ತೊಂದು ಹೆಸರು. ಶ್ರೀಗಳ ಸೇವೆಗೆ ನಮ್ಮ ಸಹಕಾರ ಯಾವತ್ತೂ ಇರುತ್ತದೆ ಎಂದರು.

ಭೂಮಾಪನಾ ಇಲಾಖೆ ಉಪನಿರ್ದೇಶಕ ಕೃಷ್ಣಪ್ರಸಾದ್ ಮಾತನಾಡಿ, ನಮ್ಮ ಕೆಲಸಗಳನ್ನು ಗಟ್ಟಿಗೊಳಿಸಿಕೊಳ್ಳಲು ಶ್ರೀಗಳ ಆಶೀರ್ವಾದವು ಮುಖ್ಯ. ಕೊರೊನಾ ಸಂದರ್ಭದಲ್ಲಿ ಮುರುಘಾಮಠದ ಈ ಕಾರ್ಯ ಅಭಿನಂದನೀಯ ಎಂದರು.

ಎ.ಸ್‌ಜೆ.ಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ವಕೀಲರಾದ ಉಮೇಶ್, ಮಹಿಳಾ ಸೇವಾ ಸಮಾಜದ ಶ್ರೀಮತಿ ಲತಾ ಉಮೇಶ್, ಎಲ್‌ಐಸಿ ಸುರೇಶ್ ಮೊದಲಾದವರು ಉಪಸ್ಥಿತರಿದ್ದರು.







